**ಅಸಲು ದಾವಾ ಸಂಖ್ಯೆ -179/2020** **ಪಿ.ಡಬ್ಲ್ಯೂ:-1**

ದಿನಾಂಕಃ **05-03-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-

ನನಗೆ ಓದು ಬರಹ ಬರುವುದಿಲ್ಲ. ವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ನಮೂದಾಗಿರುವ ಸಹಿ ನನ್ನದು. 1 ನೇ ಪ್ರತಿವಾದಿ ನಮ್ಮ ಊರಿನವರು. ನನಗೆ 47 ವರ್ಷ ವಯಸ್ಸು. 1 ನೇ ಪ್ರತಿವಾದಿಗೂ ಸಹ ನನ್ನಷ್ಟೆ ವಯಸ್ಸು. ನಾನು ಮತ್ತು 1 ನೇ ಪ್ರತಿವಾದಿ ಒಂದೇ ಊರಿನವರು ಮತ್ತು ಒಂದೇ ಜನಾಂಗದವರು ಎಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿ ಒಟ್ಟಿಗೆ ಬೆಳೆದಿದ್ದೇವೆ ಎಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿ ಆಗಾಗ್ಗೆ ಅವರ ಮನೆಗೂ ನಮ್ಮ ಮನೆಗೂ ಹೋಗುತ್ತಾ ಬರುತ್ತಾ ಇದ್ದೆವು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯೊಂದಿಗೆ ಯಾವುದೇ ಗೆಳೆತನ ಇರುವುದಿಲ್ಲ. 1 ನೇ ಪ್ರತಿವಾದಿಗೆ 3 ಜನ ಮಕ್ಕಳು ಅಂದರೆ ಅಭಿಲಾಶ್ ನಾಯ್ಕ, ಸಂತೋಷ ನಾಯ್ಕ ಮತ್ತು ರಕ್ಷಿತ ಬಾಯಿ. ಸಂತೋಷ ನಾಯ್ಕ ಮತ್ತು ರಕ್ಷಿತ ಬಾಯಿ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಂತೋಷ ನಾಯ್ಕ ಮತ್ತು ರಕ್ಷಿತ ಬಾಯಿ ನಿಪಿ-1 ಕ್ರಯ ಪತ್ರವನ್ನು ಬರೆದುಕೊಡುವ ಸಮಯದಲ್ಲಿ ಅವರು ಅಪ್ರಾಪ್ತವಯಸ್ಕರಾಗಿದ್ದರಿಂದ ಅವರ ಹೆಸರನ್ನು ನಮೂದು ಮಾಡಿರುವುದಿಲ್ಲ. ಆದ ಕಾರಣ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಂತೋಷ ನಾಯ್ಕ ಮತ್ತು ರಕ್ಷಿತ ಬಾಯಿ ರವರು ಅಪ್ರಾಪ್ತವಯಸ್ಕರಾಗಿರುವ ಬಗ್ಗೆ ಮತ್ತು 1 ನೇ ಪ್ರತಿವಾದಿ ಅವರನ್ನು ಪ್ರತಿನಿಧಿಸುವ ಬಗ್ಗೆ ನಿಪಿ-1 ಕ್ರಯ ಪತ್ರದಲ್ಲಿ ನಮೂದಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-1 ಕ್ರಯ ಪತ್ರದಲ್ಲಿ ಸಂತೋಷ ನಾಯ್ಕ ಮತ್ತು ರಕ್ಷಿತ ಬಾಯಿ ರವರ ಹೆಸರು ನಮೂದಾಗಿರುವುದಿಲ್ಲ

ಮತ್ತು ಅವರು ಸಹಿಯನ್ನು ಸಹ ಮಾಡಿರುವುದಿಲ್ಲ ಎಂದರೆ ಸರಿ. ರಕ್ಷಿತ ಬಾಯಿ ಈಗ ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನಾನು ಮತ್ತು 1 ನೇ ಪ್ರತಿವಾದಿ ಇಬ್ಬರೂ ಪರಸ್ಪರ ಗೆಳೆಯರು ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಕಷ್ಟ ಕಾಲದಲ್ಲಿ ಹಣವನ್ನು ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಆಗಾಗ್ಗೆ ನಾನು ಸಾಲವನ್ನು ಕೊಡುತ್ತಿದ್ದೆನು ಮತ್ತು ಆಗಾಗ್ಗೆ ಪ್ರತಿವಾದಿಯು ಸಹ ನನಗೆ ಸಾಲವನ್ನು ಕೊಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನ್ನಿಂದ ರೂ.10,000/- ಸಾಲವನ್ನು ಪಡೆದುಕೊಂಡು ಅದರ ಭದ್ರತೆಗೋಸ್ಕರ ನಿಪಿ-1 ಕ್ರಯ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನ್ನಿಂದ ರೂ.10,000/- ಸಾಲವನ್ನು ಪಡೆದುಕೊಂಡಿದ್ದು ಅದರ ಬಾಬ್ತಾಗಿ ಭದ್ರತೆಗಾಗಿ ನಿಪಿ-1 ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆ ವಿನಃ 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಲು ನಿಪಿ-1 ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಮಾರಾಟ ಮಾಡಲು ನನ್ನ ಬಳಿ ಯಾವತ್ತೂ ಬಂದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನ್ನಿಂದ ಪಡೆದುಕೊಂಡ ರೂ.10,000/- ಹಣವನ್ನು ವಾಪಾಸ್ಸು ಕೊಡಲು ಸಿದ್ಧರಾಗಿದ್ದರು ಸಹ ನಾನು ಸದರಿ ಹಣವನ್ನು ಪಡೆದುಕೊಂಡು ನಿಪಿ-1 ಕ್ರಯದ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ರದ್ದುಯಾತಿ ಕ್ರಯದ ಕರಾರು ಪತ್ರವನ್ನು ಬರೆದುಕೊಡದೇ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗೆ ತಿಳುವಳಿಕೆ ಪತ್ರವನ್ನು ಕೊಟ್ಟಿದ್ದೆವು ಆದರೆ ನಿರ್ದಿಷ್ಟವಾದ ದಿನಾಂಕ ನನಗೆ ನೆನಪಿಲ್ಲ. ವಾದ ಪತ್ರದಲ್ಲಿ ಕಾನೂನು ತಿಳುವಳಿಕೆ ಪತ್ರವನ್ನು ನೀಡಿದ ದಿನಾಂಕ 23-09-2020 ಎಂದು ನಮೂದಾಗಿದ್ದು ಮತ್ತು ಅಂಚೆ ರಶೀದಿಯಲ್ಲಿ ದಿಃ 25-09-2020 ಎಂದು ನಮೂದಾಗಿದ್ದು ಸದರಿ ದಿನಾಂಕಗಳಲ್ಲಿ ಯಾವ ದಿನಾಂಕದಂದು ನೋಟೀಸನ್ನು ಕಳುಹಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಕಾನೂನು ತಿಳುವಳಿಕೆ ಪತ್ರದಲ್ಲಿ 1

ನೇ ಪ್ರತಿವಾದಿಗೆ ಉಪನೊಂದಣಿ ಕಚೇರಿಯಲ್ಲಿ ತನ್ನ ವಾರಸುದಾರರೊಂದಿಗೆ ಹಾಜರಾಗುವಂತೆ ತಿಳಿಸಿರುವ ಬಗ್ಗೆ ನನಗೆ ನೆನಪಿಲ್ಲ. ನನ್ನ ಕಾನೂನು ತಿಳುವಳಿಕೆ ಪತ್ರದಲ್ಲಿ 1 ನೇ ಪ್ರತಿವಾದಿಗೆ ತನ್ನ ವಾರಸುದಾರರನ್ನು ಉಪನೊಂದಣಿ ಕಚೇರಿಗೆ ಕರೆದುಕೊಂಡು ಬರುವಂತೆ ವಿಚಾರ ನಮೂದಾಗಿಲ್ಲ ಎಂದರೆ ನನಗೆ ನೆನಪಿಲ್ಲ. ನಾನು ನೀಡಿದ ತಿಳುವಳಿಕೆ ಪತ್ರಕ್ಕೆ ಪ್ರತಿವಾದಿಗಳು ಪ್ರತ್ಯುತ್ತರವನ್ನು ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ದಿಃ 06-10-2020 ರಂದು ಪ್ರತಿವಾದಿಗಳು ನಿಪಿ-6 ರಂತೆ ಪ್ರತ್ಯುತ್ತರವನ್ನು ಕೊಟ್ಟಿದ್ದಾರೆ ಎಂದರೆ ಸರಿ. ನಿಪಿ-6 ಪ್ರತ್ಯುತ್ತರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಮ್ಮ ವಕೀಲರು ನಿಪಿ-6 ಪ್ರತ್ಯುತ್ತರದಲ್ಲಿ ನಮೂದಾಗಿರುವ ವಿಚಾರಗಳನ್ನು ನನಗೆ ಓದಿ ಹೇಳಿ ತಿಳಿಸಿದ್ದರು ಆದರೆ ಈಗ ನನಗೆ ಏನು ಬರೆದಿದೆ ಎನ್ನುವ ವಿಚಾರ ನೆನಪಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.